ಶ್ರೀ ಜೆ. ಹೆಚ್. ಪಟೇಲ್.—ಬೆಂಗಳೂರಿನಲ್ಲಿ ಭಾರಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಮತ್ತು ವಿದ್ಯುಚ್ಛಕ್ತಿಯನ್ನು ಹೆಚ್ಚು ಬೇಡತಕ್ಕ ಕೈಗಾರಿಕೆಗಳಿಗೆ ಅವಕಾಶ ಕೊಡುವುದಿಲ್ಲ. ಎಲೆಕ್ಟ್ರಾನಿಕ್ ಉಪಕರಣಗಳನ್ನು ತಯಾರು ಮಾಡುವ ಕೈಗಾರಿಕೆಗಳಿಗೆ ಮಾತ್ರ ಇಲ್ಲಿ ಅವಕಾಶ ಕೊಡುತ್ತೇವೆ. ಬೆಂಗಳೂರಿನಲ್ಲಿ ಕೈಗಾರಿಕೆಗಳ ಸಮಸ್ಯೆ ಒಂದೇ ಇಲ್ಲ. ದಿನನಿತ್ಯ ಲಾ ಅಂಡ್ ಆರ್ಡರ್‌ದು ಸಮಸ್ಯೆ ಆಗಿದೆ, ನೀರಿನ ಸರಬರಾಜು ಮಾಡುವುದು ಕಷ್ಟವಾಗಿದೆ. ಆದ್ದರಿಂದ ಬೆಂಗಳೂರಿನಲ್ಲಿ ಕೈಗಾರಿಕೆಗಳಿಗೆ ಅವಕಾಶ ಕೊಡುವುದಿಲ್ಲ. ಬೆಂಗಳೂರಿನಿಂದ ಇಷ್ಟೇ ಕಿಲೋಮೀಟರ್ ದೂರದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ನಿಯಮವೇನು ಮಾಡಿಲ್ಲ. ಗ್ರೀನ್‌ಬೆಲ್ಟ್ ಏರಿಯಾದಿಂದ ಹೊರಗೆ ಕೈಗಾರಿಕೆಗಳನ್ನು ಮಾಡಬಹುದು. ಪಪರ್ ಓರಿಯೆಂಟೆಡ್ ಆಥವಾ ಪಲ್ಯೂಷನ್ ಪ್ರಾಬ್ಲಮ್ ಬರುವ ಹಾಗಿದ್ದರೆ ಸ್ವಲ್ಪ ದೂರದಲ್ಲಿ ಮಾಡಬೇಕಾಗಿರುತ್ತದೆ.

ಗ್ರಾಮೀಣ ಎಣ್ಣೆ ಉದ್ದಿಮೆ

೧೫೦೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಬಂದರು, ವಿಮಾನಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿರುವ ಗ್ರಾಮೀಣ ಉದ್ದಿಮೆಗಳಲ್ಲಿ ಎಣ್ಣೆ ಉತ್ಪಾದನೆಗಾಗಿ ರಾಜ್ಯ ಖಾದಿ ಗ್ರಾಮೋದ್ಯೋಗದಿಂದ ಆರ್ಥಿಕ ಸೌಲಭ್ಯ ಒದಗಿಸಲಾದ ಘಟಕಗಳ ಸಂಖ್ಯೆ ಎಷ್ಟು ?

ಆ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಸದರಿ ಘಟಕಗಳ ಪೈಕಿ ಎಷ್ಟು ಘಟಕಗಳು (ಪ್ರಗತಿಯಾಹಾದಿಯಲ್ಲಿದೆ) ಉತ್ಪಾದನೆಯಲ್ಲಿವೆ ?

ಇ) ಸದರಿ ತಾಲ್ಲೂಕ್‌ನಲ್ಲಿರುವ ಘಟಕಗಳಿಗೆ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರು ಮಾಡಲಾದ ಮೊತ್ತವೆಷ್ಟು ?

ಈ) ಸದರಿ ಹಣ ಮಂಜೂರು ಮಾಡುವಲ್ಲಿ ಹಣದ ಅವ್ಯವಹಾರ ನಡೆದಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಬಂದರು, ವಿಮಾನಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಹೌದು

ಬಿ) ೫೪ ಘಟಕಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗಿದೆ.

೧. ಸಹಕಾರ ಸಂಘಗಳಂ

೮ ನೋಂದಾಯಿತ ಸಂಸ್ಥೆಗಳು

೩. ವೈಯುಕ್ತಿಕ ವ್ಯಕ್ತಿಗಳಂ

ಸಿ) ಎರಡು ಘಟಕಗಳು ಉತ್ಪಾದನೆಯಲ್ಲಿವೆ.

ಇ) ವಿವರಗಳು ಈ ಕೆಳಕಂಡಂತೆ ಇವೆ:—

ಕೈಗಾರಿಕೆಗಳ ಹೆಸರು	ಘಟಕಗಳ ಸಂಖ್ಯೆ	ಸಾಲ	ಸಹಾಯಧನ
೧) ಬೆತ್ತ ಮತ್ತು ಬಿದಿರಿಂ ಉದ್ದಿಮೆ :			
ಶ್ರೀನಿವಾಸ ಬೊಂಬು ತಯಾರಿಸುವವರ ಸಂಘ–ಮುಳಬಾಗಿಲು (೧೯೮೪–೮೫)	೨೭(ವೈಯಕ್ತಿಕ ಘಟಕಗಳು)	೧೨.೯೬೦	೧೯,೪೪೦
೨) ಚರ್ಮ ಕೈಗಾರಿಕೆ :			
೧೯೮೩–೮೪ನೇ ಸಾಲಿಗೆ ವೈಯಕ್ತಿಕ ಮೋಚಿ ಕಸಬುದಾರರ ಘಟಕಗಳು	೧೬	೧೬,೦೦೦	೨೪,೦೦೦
೧೯೮೫–೮೬ನೇ ಸಾಲಿಗೆ ವೈಯಕ್ತಿಕ ಮೋಚಿ ಕಸಬುದಾರರ ಘಟಕಗಳು	೧೦	೧೦,೦೦೦	೧೫,೦೦೦
೧೯೮೫–೮೬ನೇ ಸಾಲಿಗೆ ವೈಯಕ್ತಿಕ ಚರ್ಮ ಹದಮಾಡುವ ಕಸಬುದಾರರು	೨೪	೫೨.೨೦೦	೬೪,೮೦೦
೩ ಏಕದಳ ಹಾಗೂ ದ್ವಿದಳ ಧಾನ್ಯಗಳು ಪರಿಷ್ಕರಣೆ ಉದ್ದಿಮೆ :			
ಮುಳಬಾಗಲು ತಾಲ್ಲೂಕಿನ ಅಂಜನ ಖಾದಿ ಗ್ರಾಮೋದ್ಯೋಗ ಸಂಘ			
೧ ಮಸಾಲಾ ಘಟಕಗಳು	೧೮	೨೮,೮೦೦	೪೩,೨೦೦
೨ ಹಪ್ಪಳ ಘಟಕಗಳು	೧೫	೨೪,೦೦೦	೩೬,೦೦೦
೪) ಬಡಗಿತನ ಮತ್ತು ಕಮ್ಮಾರಿಕೆ ಉದ್ದಿಮೆ :			
೧ ಕಮ್ಮಾರಿಕೆ	೧೦	೯,೨೦೦	೧೩,೮೦೦
೨ ಬಡಗಿತನ	೧೦	೧೪,೦೦೦	೨೧,೦೦೦
೧೯೮೩–೮೪ ಬಡಗಿತನ			
ವಿಶ್ವಕರ್ಮ ಕಾರ್ಪೆಂಟ್ರಿ ಇಂಡಸ್ಟ್ರೀಸ್ ಮುಳಬಾಗಲು, ಕೋಲಾರ ಜಿಲ್ಲೆ.	೧೦	೨೧,೦೦೦	೩೫ ೦೦೦
ಗಣೇಶ ಖಾದಿ ಮತ್ತು ಗ್ರಾಮೋದ್ಯೋಗ ಸಂಘ. ಕಮದಶ್ತಿ, ಮುಳಬಾಗಲು, ಕೋಲಾರ ಜಿಲ್ಲೆ.			
(ಕಮ್ಮಾರಿಕೆ)	೧೦	೩೭,೨೮೦	೩೮,೨೮೦

ಈ) ಅವ್ಯವಹಾರ ನಡೆದಿರುವ ಬಗ್ಗೆ ಯಾವ ವರದಿಯು ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಇದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಈಗ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾ ಇದ್ದಾರೆ. ಅವರು (ಅ) ಪ್ರಶ್ನೆಗೆ ಉತ್ತರವನ್ನು ಸರಿಯಾಗಿ ಕೊಟ್ಟಿಲ್ಲ ಸರಿಯಾದ ಉತ್ತರವನ್ನು ಕೊಡಬೇಕು (ಆ) ಪ್ರಶ್ನೆಗೆ ಕೆಳ ಘಟಕಗಳಿಗೆ ಆರ್ಥಿಕ ಸೌಲಭ್ಯವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. (ಆ) ಪ್ರಶ್ನೆಗೆ ಉತ್ತರ ಸರಿಯಾಗಿ ತಿಳಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ(ಶ್ರೀ ಎಂ. ರಘುಪತಿಯವರ ಪರವಾಗಿ).—ಮಾನ್ಯ ಸದಸ್ಯರು ಕೋಲಾರ ಜಿಲ್ಲೆಯಲ್ಲಿರುವ ಗ್ರಾಮೀಣ ಉದ್ದಿಮೆಗಳಲ್ಲಿ ಎಣ್ಣೆ ಉತ್ಪಾದನೆಗಾಗಿ ರಾಜ್ಯ ಖಾದಿ ಗ್ರಾಮೋದ್ಯೋಗದಿಂದ ಆರ್ಥಿಕ ಸೌಲಭ್ಯ ಒದಗಿಸಲಾದ ಘಟಕಗಳು ಎಷ್ಟು ಎಂದು ಕೇಳಿದ್ದಾರೆ, ಅದಕ್ಕೆ ೫೪ ಎಂದು ಉತ್ತರದಲ್ಲಿ ಹೇಳಿದ್ದೇನೆ. (ಇ) ಪ್ರಶ್ನೆಗೆ ಸದರಿ ತಾಲ್ಲೂಕಿನಲ್ಲಿರುವ ಘಟಕಗಳಿಗೆ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರು ಮಾಡಲಾದ ಮೊತ್ತವೆಷ್ಟು ಎಂದು ಕೇಳಿದ್ದಾರೆ, ಅದಕ್ಕೂ ಕೂಡ ವಿವರವಾದ ಉತ್ತರವನ್ನು ಅನುಬಂಧದಲ್ಲಿ ಕೊಟ್ಟಿರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಉತ್ತರ ಕೊಟ್ಟಿದ್ದು (ಅ) ಪ್ರಶ್ನೆಗೆ. (ಆ) ಪ್ರಶ್ನೆಗೆ ನಾನು ಕೇಳಿದ ಪ್ರಕಾರ ಉತ್ತರವನ್ನು ಕೊಟ್ಟಿಲ್ಲ. ಅದರ ವಿವರಗಳನ್ನು ಹೇಳುತ್ತೀರಾ ? ಹಾಗೆಯೇ (ಈ) ಪ್ರಶ್ನೆಗೆ ಅವ್ಯವಹಾರ ನಡೆದಿರುವ ಬಗ್ಗೆ ವರದಿಯು ಬಂದಿಲ್ಲ ಎಂದೂ ಉತ್ತರ ಹೇಳಿದ್ದಾರೆ. ಈ ಬಗ್ಗೆ ಜಿಲ್ಲಾಪರಿಷತ್ತಿನ ವಿೂಟಿಂಗ್‌ನಲ್ಲಿ ವಿಷಯ ಪ್ರಸ್ತಾಪಕ್ಕೆ ಬಂದರೂ ಕೂಡ, ಅವ್ಯವಹಾರದ ಬಗ್ಗೆ ವರದಿ ಬಂದಿಲ್ಲ ಎಂದು ಹೇಳಂತ್ತಿದ್ದಾರೆ. ಅಸಿಸ್ಟೆಂಟ್ ಕಮೀಷನರ್‌ರವರು ಕೂಡ ತನಿಖೆ ಮಾಡುತ್ತಿರುವುದೂ ತಮ್ಮ ಅವಗಾಹನೆಗೆ ಬಂದಿಲ್ಲವೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮುಳಬಾಗಿಲು ತಾಲ್ಲೂಕಿನಲ್ಲಿರತಕ್ಕಂಥ ೮ ಎಣ್ಣೆ ಘಟಕಗಳಲ್ಲಿ ಎರಡು ಕೆಲಸ ಮಾಡುತ್ತಾ ಇವೆ. ಎರಡು ಘಟಕಗಳ ಮೇಲೆ ರೆವಿನ್ಯೂ ರಿಕವರಿಗಾಗಿ ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇನ್ನೂ ಎರಡರ ಬಗ್ಗೆ ಇಲ್ಲಿ ವಿವರಗಳು ಸಿಕ್ಕಿಲ್ಲ, ಎರಡೂ ಚೆನ್ನಾಗಿ ನಡೆಯುತ್ತಾ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಕೇಳುತ್ತಾ ಇರುವ ವಿಷಯ ಮಾನ್ಯ ಮಂತ್ರಿಯವರಿಗೆ ಅರ್ಥವಾಗುತ್ತಾ ಇಲ್ಲ. ಇದರಲ್ಲಿ ಮಂಸಾಲ ಘಟಕಗಳು ಇವೆ. ಇದರ ಮಂಸಾಲ ಆಫೀಸರಿಗೆ ಹೋಗುತ್ತಾ ಇದೆ ಎಂದು ಕಾಣುತ್ತದೆ. ಇನ್ನು ಹಪ್ಪಳದ ಘಟಕವೇನಿದೆ, ಅದು ಯಾರನ್ನು ಹಪ್ಪಳ ಮಾಡುತ್ತಿದೆಯೋ ಗೊತ್ತಿಲ್ಲ. ಬಡಗಿತನ, ಕಮ್ಮಾರಿಕೆ, ಬೆತ್ತ ಮತ್ತು ಬಿದಿರಿಂ ಉದ್ದಿಮೆ. ಖಾದಿ ಮತ್ತು ಗ್ರಾಮೋದ್ಯೋಗ ಮುಂತಾಗಿ ಎಲ್ಲಕ್ಕೂ ಒಂದು ಬೋರ್ಡ್ ಮಾತ್ರ ಇದೆ. ಇದಕ್ಕೆಲ್ಲಾ ೪೪ ಲಕ್ಷದ ೮೮ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಬೆಂಗಳೂರಿನಲ್ಲಿರುವ ಸಬ್ಬವ್ಮ್ ಎಂಬ ಮಹಿಳೆಗೆ ಒಂದೂ ಉದ್ಯಮವನ್ನು ಕೊಟ್ಟಿದ್ದಾರೆ. ಇದರಲ್ಲೆಲ್ಲಾ ಆಫೀಸರ್ಸ್‌ಗೆ ೫೦ ಪರ್ಸೆಂಟ್ ಮತ್ತು ಇವರಿಗೆ ೫೦ ಪರ್ಸೆಂಟ್ ಎಂದು ನಿಗದಿಯಾಗಿರುತ್ತದೆ. ಹೀಗಾಗಿ ಒಂದು ಘಟಕ ಕೂಡ ಚೆನ್ನಾಗಿ ಕೆಲಸ ನಿರ್ವಹಿಸುತ್ತಾ ಇಲ್ಲ. ಇದೂ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ವಿಚಾರಣೆ ನಡೆಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ವಿಶೇಷ ಘಟಕ ಯೋಜನೆಗಳಲ್ಲಿ ಸಾಮಾನ್ಯವಾಗಿ ೪೦ ಪರ್ಸೆಂಟ್ ಲೋನ್ ಮತ್ತು ೬೦ ಪರ್ಸೆಂಟ್ ಸಬ್ಸಿಡಿ ಕೊಡತಕ್ಕಂಥ ಒಂದು ಅಟ್ರಾಕ್ಷನ್ ಇದೆ. ಇದಕ್ಕಾಗಿ ಬಹಳ ಜನರು ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಒಂದೂ ಬೋರ್ಡ್ ಹಾಕುತ್ತಾರೆ. ಮೆಶಿನರಿಯನ್ನು ತೆಗೆದುಕೊಳ್ಳುತ್ತಾರೆ. ಯಾವುದಾದರೂ ಒಂದು ಎರಡು ಕೆಲಸವನ್ನು ಮಾಡಿ, ಅನಂತರ ಅವರ ಪತ್ತೆ ಇರುವುದಿಲ್ಲ. ಅಂತಹ ಸಂದರ್ಭಗಳು ಬಹಳ ಇರಬಹುದು. ನಮ್ಮ ತುಮಕೂರಿನಲ್ಲಿ ಕೂಡ ಇಂಥ ಪರಿಸ್ಥಿತಿಯು ಆಗಿತ್ತು. ಅಲ್ಲಿ ಒಂದು ಘಟಕಕ್ಕೆ ಹಣ ಕೊಟ್ಟಿದ್ದರೂ ಕೂಡ ಮೆಶಿನರಿ ಸಪ್ಲೈ ಮಾಡಿರಲಿಲ್ಲ. ಆ ಮೇಲೆ ನಾವು ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಾನೂ ಖಾದಿ ಗ್ರಾಮೋದ್ಯೋಗದ ಅಧ್ಯಕ್ಷರಿಗೆ ಪತ್ರ ಬರೆದು ವಿಶೇಷ ತನಿಖೆ ನಡೆಸಿ ವರದಿಯನ್ನು ಅವರ ಗಮನಕ್ಕೆ ತರುವಂತೆ ಕೋರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಯ್ಯಮ್ಮ ಖಾದಿ ಗ್ರಾಮೋದ್ಯೋಗ ಮಂಡಲಿಯ ಅಧ್ಯಕ್ಷರ ಜೊತೆ ಕಾರಿನಲ್ಲಿ ಕುಳಿತುಕೊಂಡು ಓಡಾಡುತ್ತಿರುವಾಗ ನೀವು ಆ ಅಧ್ಯಕ್ಷರಿಂದ ಏನೂ ಮಾಡಿಸುತ್ತೀರಿ ಸ್ವಾಮಿ, ಹಪ್ಪಳ ತಯಾರು ಮಾಡುವುದಕ್ಕೆ ೧೦ ರೂಪಾಯಿ ಸಾಮಾನ್ಯ ಸಾಕು, ಆದರೆ ಅದಕ್ಕೆ

ಬೋರ್ಡಿನವರು ಕೊಟ್ಟಿರುವುದು ೪.೮೮ ಲಕ್ಷ ರೂಪಾಯಿ ಆದ್ದರಿಂದ ಬೇರೆಯವರ ಕಡೆಯಿಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ಹೆಂಗಸಿನ ಜೊತೆ ಬೋರ್ಡಿನ ಅಧ್ಯಕ್ಷರು ಓಡಾಡುವುದನ್ನು ನಾನು ಅಬ್ಜೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಹಪ್ಪಳ ಮಾಡದೇ ಇದ್ದರೆ, ಕೈಗಾರಿಕೆ ನಡೆಸದೇ ಇದ್ದರೆ ಅದರ ಬಗ್ಗೆ ಎನ್‌ಕ್ವಯರಿ ಮಾಡಿಸೋಣ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ವೆಂಕಟರಾಮಯ್ಯನವರು ಹೇಳುತ್ತಿರುವುದು ಆವರಂ ಹಪ್ಪಳ ಮಾಡುತ್ತಿದ್ದಾರೆ ಆಂತ ಅಲ್ಲ, ಲೋನನ್ನೇ ಹಪ್ಪಳ ಮಾಡುತ್ತಿದ್ದಾರೆ ೫೦:೫೦ ಪರ್ಸೆಂಟ್ ಮೇಲೆ. ಇದಕ್ಕಿಂತ ಫೇರಾದ ಫಾರ್ಮುಲಾ ಜಗತ್ತಿನಲ್ಲಿ ಇಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ತರಹ ಆಗುವುದಕ್ಕೆ ಬಿಡುವುದಿಲ್ಲ. ಸೀನಿಯರ್ ಆಫೀಸರ್ ಕೈಯಲ್ಲಿ ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಟರಾಮಯ್ಯ.—ಅಲ್ಲಿಯವರೆಗೆ ಹಪ್ಪಳ ಮಾಡುವುದನ್ನಾದರೂ ನಿಲ್ಲಿಸುತ್ತೀರಾ.

ಉಪಾಧ್ಯಕ್ಷರು.—ವೆಂಕಟರಾಮಯ್ಯನೋರೆ ಡಿಸ್ಕಷನ್‌ಗೆ ಅವಕಾಶ ಇಲ್ಲ, ದಯವಿಟ್ಟು ಕೂರಿ

ರಾಜ್ಯದ ರೇಷ್ಮೆ ಯೋಜನೆಯ ನೀಲಿ ನಕ್ಷೆಯು ವಿಷಯ

೧೪೦೧. ಶ್ರೀ ಜಿ. ರಾಜೂಗೌಡ (ಹಸೂರು).—ಕಾನೂನುಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದ ರೇಷ್ಮೆ ಯೋಜನೆಯು ಎರಡನೆ ಹಂತದ (ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್)ನೀಲಿ ನಕ್ಷೆ ತಯಾರಾಗಿದೆಯೇ.

ಆ) ಅದರ ಒಟ್ಟು ಅಂದಾಜು ವೆಚ್ಚ ಎಷ್ಟು ?

ಇ) ಉತ್ಪಾದನೆ ಬಾಬ್ತುಗಳ ವೆಚ್ಚ ಹಾಗೂ ಉತ್ಪಾದನೆಗಳಲ್ಲದ ಬಾಬ್ತುಗಳಿಗೆ ಎಷ್ಟು ವೆಚ್ಚವಾಗಲಿರುವ ವಿವರ ಒದಗಿಸುವುದು.

ಶ್ರೀ ಎ. ಲಕ್ಷ್ಮೀಸಾಗರ್ (ರೇಷ್ಮೆ ಖಾತೆ ಸಚಿವರು).—

ಅ) ತಯಾರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜುಗೌಡ.—ವಿಶ್ವಬ್ಯಾಂಕಿನ ನೆರವಿನ ಬಗ್ಗೆ ನೀವು ಎಷ್ಟು ನಿರೀಕ್ಷೆ ಮಾಡಿದ್ದೀರಿ ? ಅದು ಬಂದ ಮೇಲೇನಾದರೂ ನೀಲಿನಕ್ಷೆ ತಯಾರಿಸುತ್ತೀರಾ ? ಆ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರ ಜತೆ ಸಮಾಲೋಚನೆ ನಡೆಸುತ್ತೀರಾ? ಏಕೆಂದರೆ ಮೊದಲನೇ ಸಲ ಮಾಡುವಾಗ ಅನುತ್ಪಾದಕ ಬಾಬಿಗೆ ಜಾಸ್ತಿ ಮಾಡಿದ್ದೀರಿ, ಈ ಸಲವಾದರೂ ಉತ್ಪಾದನಾ ಬಾಬಿಗೆ ಜಾಸ್ತಿ ಮಾಡಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸಲಹೆಗಳು ಏನಿದ್ದರೂ ಮಹತ್ವದ ಸಲಹೆಗಳೆಂದು ಪೂರ್ಣವಾಗಿ ಬೆಲೆ ಕೊಟ್ಟು ಗಣನೆಗೆ ತೆಗೆದುಕೊಳ್ಳುತ್ತೇನೆ. ಅವರು ತಮ್ಮ ಸಲಹೆಗಳನ್ನು ನನಗೆ ಕಳಿಸಿಕೊಡಲಿ ಎಂದು ವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ.—ಇದರಲ್ಲಿ ಅತಿ ಮುಖ್ಯವಾದದ್ದೆಂದರೆ ನೀಲಿನಕ್ಷೆ ತಯಾರು ಮಾಡುವಾಗ ಕಾಮನ್ ರೀಲಿಂಗ್ ಶೆಡ್‌ಗಳನ್ನು ಮಾಡಿದರೆ ಆಯಾ ಸ್ಥಳದಲ್ಲಿರುವ ರೇಷ್ಮೆ ಕೆಲಸ ಮಾಡುವ ಬಡವರಿಗೆ ಸಹಾಯ ಮಾಡಿದಂತಾಗುತ್ತದೆ. ಇದರ ಬಗ್ಗೆ ಕಳೆದ ನಾಲ್ಕು ವರ್ಷಗಳಿಂದ ಈ ಬಗ್ಗೆ ಕೇಳುತ್ತಿದ್ದೇನೆ. ಈಗಲಾದರೂ ಇದನ್ನು ಮಾಡಿಸುತ್ತೀರಾ ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಡಿಪ್ಯಾಂಡ್ ಮೇಲೆ ಮಾತನಾಡುವಾಗ ರಾಜುಗೌಡರು ಈ ಸಲಹೆ ಕೊಟ್ಟಿದ್ದರು. ಅದಕ್ಕೆ ನಾನು ಉತ್ತರವನ್ನೂ ಕೊಟ್ಟಿದ್ದೆ. ಆಗ ಗಣನೆಗೆ ತೆಗೆದುಕೊಂಡು ಪರಿಶೀಲನೆ ಮಾಡುವುದಾಗಿ ತಿಳಿಸಿದ್ದೆ, ಅದೇ ಉತ್ತರವನ್ನು ಈಗಲೂ ಹೇಳಿದರೆ ಅವರು ಬೇಜಾರು ಮಾಡಿಕೊಳ್ಳಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.